ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಹಂಚಿಕೆ

3031 - ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೂತನ ಸರ್ಕಾರ ಬಂದ ನಂತರ ರಾಜ್ಯದಲ್ಲಿ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳ ಹಂಚಿಕೆಗೆ ನಿಗಧಿಪಡಿಸಿರುವ ಗುರಿ ಎಷ್ಟು? ಈವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ? ಪೂರ್ಣಗೊಳಿಸಿದ ಮನೆಗಳ ಸಂಖ್ಯೆ ಎಷ್ಟು? ಕ್ಷೇತ್ರವಾರು ವಿವರ ನೀಡುವುದು?*

ಆ) *ಈ ಮನೆಗಳನ್ನು ಹಂಚುವಾಗ ತಾಲ್ಲೂಕುವಾರು ಹಂಚಲಾಗಿದೆಯೆ ಅಥವಾ ಕ್ಷೇತ್ರವಾರು ಹಂಚಲಾಗಿದೆಯೆ ಹಾಗೂ ಜನಸಂಖ್ಯಾ ಆಧಾರದ ಮೇಲೆ ಹಂಚಲಾಗಿದೆಯೇ ವಿವರ ನೀಡುವುದು?*

ಇ) *ಆಶ್ರಯ ಅಂಬೇಡ್ಕರ್ ಇಂದಿರಾ ಆವಾಜ್ ಮನೆಗಳ ಹಂಚಿಕೆಯಲ್ಲಿ ಮುಂಡರಗಿ ಕ್ಷೇತ್ರಕ್ಕೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಯೋಜನೆಗಳು	ಗುರಿ	ಪೂರ್ಣಗೊಳಿಸಿದ ಮನೆಗಳ ಸಂಖ್ಯೆ	ಬಿಡುಗಡೆಯಾದ ಹಣ (ರೂ. ಲಕ್ಷ ಗಳಲ್ಲಿ)
ಆಶ್ರಯ		23,735	5581.04
(ಗ್ರಾ)	1,30,000		
(ನ)	25,000		
ಅಂಬೇಡ್ಕರ್	19,442	6,926	1263.00
ಇಂದಿರಾ ಆವಾಜ್	31,456	9,422	3141,59

ಅ) ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಯಡಿ ಮನೆಗಳನ್ನು (ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಹೊರತುಪಡಿಸಿ) ವಿಧಾನ ಸಭಾ ಕ್ಷೇತ್ರವಾರು ಹಂಚಲಾಗಿದೆ. ಇಂದಿರಾ ಆವಾಸ್ ಯೋಜನೆಯಡಿ ಮನೆಗಳನ್ನು ಜಿಲ್ಲಾವಾರು ನೀಡಲಾಗಿದೆ.

ಇ) ಅಂಬೇಡ್ಕರ್ ಯೋಜನೆಯಡಿ ಸರ್ಕಾರದ ಗಮನ ಬಂದಿದ್ದು, ಈ ಬಗ್ಗೆ ಸರ್ಕಾರದಲ್ಲಿ ಸೂಕ್ತಕ್ರಮ ಕೈಗೊಳ್ಳಲಾಗುತ್ತಿದೆ.

ಗದಗದಲ್ಲಿ ತೋಟಗಾರಿಕಾ ಸಂಶೋಧನಾ ಕೇಂದ್ರದ ವರ್ಗಾವಣೆ

3032 - ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮಂಡರಗಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗದಗದಲ್ಲಿರುವ ತೋಟಗಾರಿಕಾ ಸಂಶೋಧನಾ ಕೇಂದ್ರ ಪ್ರಾರಂಭವಾಗಿ ಎಷ್ಟು ವರ್ಷಗಳಾಯಿತು? ಸದರಿ ತೋಟವನ್ನು ಗದಗ ಬಸ್ ನಿಲ್ದಾಣಕ್ಕೆ ಕಟ್ಟಡ ಕಟ್ಟಲು ಕೊಡುವ ವಿಚಾರ ಸರ್ಕಾರದ ಮುಂದಿದೆಯೇ?

2) ಹಾಗಿದ್ದಲ್ಲಿ ಈ ತೋಟವನ್ನು ಬಸ್ ನಿಲ್ದಾಣಕ್ಕೆ ನೀಡುವುದರಿಂದ ಪರಿಸರ ಹಾಳಾಗುವುದು ನಿಜವಲ್ಲವೇ?

3) ಈ ತೋಟದ ವರ್ಗಾವಣೆಯನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

1) 21 ವರ್ಷಗಳು ಹೌದು.

2) ಪರಿಸರವನ್ನು ಸಂರಕ್ಷಿಸಲು ಜಾರಿಯಲ್ಲಿರುವ ಕಾಯ್ದೆ ಹಾಗೂ ನಿಯಮಗಳ ವ್ಯಾಪ್ತಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯ ದ್ರಾಕ್ಷಿ, ದಾಳಿಂಬೆ ಹಾಗೂ ಲಿಂಬೆ ಹಣ್ಣಿನ ಸಂಸ್ಕರಣೆ ಶೈತ್ಯಾಗಾರ

3033 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೆಗೌಡ (ತಿಕೋಟ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ದ್ರಾಕ್ಷಿ, ದಾಳಿಂಬೆ ಲಿಂಬೆ, ಹಣ್ಣಿನ ಬೆಳೆಗಳಿಗೆ ಪ್ರಸಿದ್ಧಿ ಪಡೆದಿರುವುದು ನಿಜವಲ್ಲವೆ?

ಆ) ಈ ಹಣ್ಣುಗಳು ಕೆಡದಂತೆ ನೋಡಿಕೊಳ್ಳಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಇ) ಇಲ್ಲದಿದ್ದರೆ ಸಹಕಾರಿ ರಂಗದಲ್ಲಿ ನಿರ್ಮಿಸಲಾದ ಹಣ್ಣು ಸಂಗ್ರಹಣೆ ಮತ್ತು ಸಂಸ್ಕರಣೆ ಶೈತ್ಯಾಗಾರ ಮತ್ತು ಮಾರಾಟ ಮಳಿಗೆಗಳನ್ನು ನಿರ್ಮಿಸಲು ಸರ್ಕಾರವು ಧನಸಹಾಯ ನೀಡುವುದೇ?

ಈ) ಸರ್ಕಾರ ಈಗಾಗಲೇ ಯಾವುದಾದರೂ ಸಹಕಾರಿ ಮಟ್ಟದ ಇಂತಹ ಘಟಕಗಳಿಗೆ ಹಣವನ್ನು ಸಹಾಯ ರೂಪದಲ್ಲಿ ಒದಗಿಸಿದೆಯೇ?